ಸ್ವಾತಿ ಎಂ.ಎಸ್. ಗೌರಿಬಿದನೂರು

ಕೊರೊನಾಗೆ ಹೆದರುವ ಬದಲು ಅದನ್ನು ಪ್ರೀತಿಸಿದರೆ ತೊಂದರೆಯಿಂದ ದೂರವಾಗಬಹುದೆ?



ಚಂದ್ರ, ಗಗನ, ಸಮುದ್ರಗಳನ್ನು ಪ್ರೀತಿಸಿದಂತೆ ದೂರದಿಂದಲೇ ಪ್ರೀತಿಸಿದರೆ ಆಗಬಹುದು.

ಚನ್ನಬಸವ ಪುತ್ತೂರು, ಚಿತ್ರದುರ್ಗ

ಮಾತಿನಲ್ಲೇ ಮಹಲು ಕಟ್ಟಿಸುವವರಿಗೆ ಏನೆನ್ನೋಣ ಗುರುವೆ?

ಡ್ರೀಮ್ ಮರ್ಚೆಂಟ್ಸ್.

ರಾಂಚಂದ್ರ ಕೊಪ್ಪಲು, ತೀರ್ಥಹಳ್ಳಿ

ಮಾದಕ ನಟಿಗೂ, ಮೋಹಕ ನಟಿಗೂ ಇರುವ ವ್ಯತ್ಯಾಸವೇನು?

ಮಾದಕ ನಟಿ ಕಾಮನ ಬಾಣ; ಮೋಹಕ ನಟಿ ಕಾಮನಬಿಲ್ಲು.

ಪುರುಷೋತ್ತಮ ರೆಡ್ಡಿ, ಪಾವಗಡ

ರಾಮಾ; 2ನೇ ಪೆಗ್ ನಂತರವೂ ನಿನ್ನಕ್ಷರಗಳು ಕಾಣ್ತವೆ! ಮದಿರೆಯ ಕುಗ್ಗಿದ ತಾಕತ್ತಿನ ಪ್ರಶ್ನೆಯಾ, ನಿನ್ನ ಹಿಗ್ಗಿದ ಉತ್ತರದ ಮೋಹವಾ?



ಸತಿ ಎದುರಿರುವಾಗ ಕುಡಿಯಬೇಡವೆಂದರೆ ಕೇಳಲಿಲ್ಲ; ಉತ್ತರವೂ ತಲೆಗೇರಿಲ್ಲ, ಪೆಗ್ಗೂ ತಲೆಗೇರಿಲ್ಲ!

ಅನಸೂಯ ಟಿ. ಕೇದಿಗೆಮನೆ

ಸೋತು ಗೆಲ್ಲಬೇಕು ಎನ್ನುತ್ತಾರಲ್ಲ, ಸೋತ ಮೇಲೆ ಗೆಲ್ಲುವ ಪ್ರಶ್ನೆ ಎಲ್ಲಿಯದು?

ಐಪಿಎಲ್ ಆಟಗಾರರಲ್ಲಿ ವಿಚಾರಿಸಿ ಅಲ್ಲಿ ಮ್ಯಾಚ್ ಸೋತು ಹಣ ಗೆಲ್ಲುವ ಕಲೆಯಲ್ಲಿ ನಿಪುಣರಿದ್ದಾರೆ.

ಪಿ.ಜೆ. ರಾಘವೇಂದ್ರ, ಮೈಸೂರು

ಎಲ್ಲ ಪ್ರಶ್ನೆಗಳಿಗೆ ಉತ್ತರಿಸುವ ತಮ್ಮನ್ನು ಉತ್ತರ ಕುಮಾರ ಎಂದು ಕರೆಯಬಹುದೆ?

ಉತ್ತರಗಳು ಪ್ರಶ್ನೆಗಳಿಗೆ ಔಷಧವಾದ್ದರಿಂದ ಉತ್ತರಾಣಿ ಸರಿಯಾದೀತು.

ಜಯವಂತ ಪೈ, ಕುಂದಾಪುರ

ಏರ್‌ಪೋರ್ಟ್ ಗೋಡೌನಿನಿಂದಲೇ ಚಿನ್ನ ಮಂಗಮಾಯ ಆಯಿತಂತಲ್ಲ?

ಹೆಸರಲ್ಲೇ ಉತ್ತರವಿದೆಯಲ್ಲ! ಉಂ ಆಂತಿಟಿ ಆಗಿರುವುದರಿಂದ ಭೂಗತವಾಗಿದೆ.

ಎಚ್.ವಿ. ರಂಗನಾಥ, ಬೆಂಗಳೂರು

ಕೆಲವು ರಾಜಕಾರಣಿಗಳಿಗೆ ಟೀವಿ ಮತ್ತು ಪತ್ರಿಕೆಯಲ್ಲಿ ಹುಲಿ, ನರಿ, ಬಂಡೆ ಎಂದೇಕೆ ಟೀಕೆ ಮಾಡುತ್ತಾರೆ?

ಕ್ರಮವಾಗಿ ಕ್ರೌರ್ಯ, ಕಪಟ, ಶೀಲಹೀನತೆ ಪ್ರದರ್ಶಿಸುವುದರಿಂದ.

ವಾಣಿ, ಮೈಸೂರು

ಬದುಕಿದ್ದಾಗ ವಿರೋಧಿಗಳನ್ನು ಬೈಯುವ ರಾಜಕಾರಣಿಗಳು ಸತ್ತಮೇಲೆ ಅವರ ಗುಣಗಾನ ಮಾಡುವುದೇಕೆ?

ಸತ್ತವನ ಕಡೆಯವರ ಮತಗಳನ್ನು ಸೆಳೆಯಬೇಕಲ್ಲ!

ಮಧುರ ಸುಬ್ರಹ್ಮಣ್ಯ, ಬೆಂಗಳೂರು

ನೀವು ಸ್ತ್ರೀ ಎಂದಮೇಲೆ ರಮಣಿ ಆಗುವ ಬದಲು ರಾಂ ಏಕೆ?

ಮಧು ಮಧುರ, ಮಧುಸೂದನ ಇಬ್ಬರಿಗೂ ಅನ್ವಯವಲ್ಲವೆ! ರಾಂ ನನ್ನ ಸ್ತ್ರೀನಾಮದ ಒಂದು ಭಾಗ.

ಶೈಲಾ ಜೋಶಿ, ಊರಿಲ್ಲ

ಸುದ್ದಿವಾಹಿನಿಗಳು ಸಾವು, ಸಿನಿಮಾ ನಟರ ವೈಯಕ್ತಿಕ ಜೀವನವನ್ನು ಅತಿಯಾಗಿ ವೈಭವೀಕರಿಸುವುದು ಏಕೆ?

ಚಟ್ಟಕ್ಕೆ, ಪಟ್ಟಕ್ಕೆ ಏರಿದವರನ್ನು ಕಣ್ಣು ಕೀಲಿಸಿ ನೋಡುವ ಭೂತಗಳ ತೃಪ್ತಿಗಾಗಿ.

ಕೆ. ಸೂರ್ಯನಾರಾಯಣ, ನಾಗರಭಾವಿ

ಹಿಂದೆ ಸರ್ಕಾರದಲ್ಲಿ ಹೂಡಿದ ಹಣ 5 ವರ್ಷಕ್ಕೆ ಇಮ್ಮಡಿ. ಇಷ್ಟೆಲ್ಲ ಕಡಿದು ದಬ್ಬಾಕಿದ್ದೇವೆನ್ನುವ ಈಗ 10 ವರ್ಷಕ್ಕೆ ಇಮ್ಮಡಿ. ಹೀಗೇಕೆ?

ಅನ್ಯವ್ಯಾಪಾರಗಳಲ್ಲಿ ಹೂಡಿಕೆಯ ಇಂಟರೆಸ್ಟ್(ಆಸಕ್ತಿ) ಹೆಚ್ಚಿದ್ದರಿಂದ ಬ್ಯಾಂಕಿನ ಇಂಟರೆಸ್ಟ್(ಬಡ್ಡಿ) ಕಡಿಮೆಯಾಯಿತು.

## ಬಹುಮಾನಿತ ಪ್ರಶ್ನೆ

ವಿ.ಕೆ. ಹಳ್ಯಾಳ, ಬನಹಟ್ಟಿ

ಬೋಳು ತಲೆಯವರು ಬಾಚಣಿಗೆ ಇಟ್ಟುಕೊಳ್ಳುವ ಗುಟ್ಟೇನು ಸರ್?

ನವೆಯಾದಾಗ ಬಾಚಣಿಗೆಯಿಂದ ಕೆರೆದುಕೊಂಡರೆ ಉಗುರಿನಲ್ಲಿ ಕೊಳೆ ಸೇರದೆಂದು.

ವಿಜಯ್‌ಕುಮಾರ್ ಎಚ್.ಕೆ. ರಾಯಚೂರು

ಅಮೆರಿಕಾದ ನೋಟಿನಲ್ಲಿ ದೇವರ ಹೆಸರ ಮೇಲೆ ಪ್ರಮಾಣವಿದೆ. ನಮ್ಮ ದೇಶದ ನೋಟಿನಲ್ಲಿ ಯಾಕೆ ಇಲ್ಲ?

ಮುಕ್ಕೋಟಿ ದೇವತೆಗಳಲ್ಲಿ ಯಾರ ಮೇಲೆ ಪ್ರಮಾಣ ಮಾಡುವುದೆಂಬ ಗೊಂದಲವಂತೆ.

ಎಲ್.ಎಸ್. ಶಿವಕುಮಾರ್, ಮೈಸೂರು

ಸ್ವಾರ್ಥ ತೊರೆದು, ಸತ್ಯ ಸೇವಿಸಿ, ಪ್ರಾಮಾಣಿಕತೆಯನ್ನು ಉಂಡು ರಾಜಕೀಯಕ್ಕೆ ಎಂಟ್ರಿ ಕೊಟ್ಟರೆ?

ಚಿಂದಿ ಬಟ್ಟೆ, ಅಲ್ಯೂಮಿನಿಯಂ ತಟ್ಟೆಗಳೇ ಗಟ್ಟಿ.

ವಿ. ಹೇಮಂತಕುಮಾರ್, ಬೆಂಗಳೂರು

ಹದ್ದು ಎಷ್ಟೇ ಎತ್ತರಕ್ಕೆ ಹಾರಿದರೂ ಆಹಾರಕ್ಕಾಗಿ ಭೂಮಿಗೆ ಬರಲೇಬೇಕಲ್ಲವೇ?



ಹದ್ದು ಮೀರಿದವರಾದರೆ ವಿಮಾನದಲ್ಲೇ ತಿನ್ನಬಹುದು. ಹದ್ದಿಗೆ ಆ ಭಾಗ್ಯವಿಲ್ಲ.

ಚನ್ನವೀರಪ್ಪ, ಬಿದರಹಳ್ಳಿ

ಮಾತು ಮತ್ತು ಮೌನದ ಸಮರ ಹೇಗಿರುತ್ತೆ?

ಹೂವು ಮತ್ತು ಮೊಗ್ಗಿನ ಸಮರದಂತೆ.

ಬಿ.ಆರ್. ಉಷಾ, ಬೆಂಗಳೂರು

ರಾಜಕಾರಣಿಗಳಲ್ಲಿ ಬರೀ ತಪ್ಪನ್ನೇ ಹುಡುಕುತ್ತಾರೆ. ಯಾಕೆ?

ಸರಿಯನ್ನು ಹುಡುಕುವುದು ವ್ಯರ್ಥವೆಂದು ತಿಳಿದಿರುವುದರಿಂದ.

■ **ರಾಮ್**

ಪ್ರಶ್ನೆ ಕಳುಹಿಸಲು: editorsu@sudha.co.in